10. HOUSE COMMITTEE

Sriyuths:

1. S.Isamiya
2. N.Jayanna
3. M.D. Shivapur
4. Smt. Damayanthi Boregowda
5. Gopinatha Sandra
6. B.S. Patil (Sasanur)
7. K. Siddaiah
8. B. Hampanagowda

11. STATE LIBRARY AUTHORITY

Sriyuths:

1. G.S. Achar
2. Mahendra Kumar
3. L.R. Shivarame Gowda
4. A.Nagaraj

12. SENATE OF BANGALORE UNIVERSITY

Sriyuths:

1. Nisar Ahamad K.A.
2. C.M. Lingappa
3. A.K. Ananthakrishna
4. Derrick M.B.Fullinfaw
5. G.G. Yalligutti

ಈಗ ನಾವು ಕೊನೆಯ ಹಂತಕ್ಕೆ ಬಂದಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹಾಗೂ ಬಿಜೆಪಿ ಸದಸ್ಯರುಗಳು ದಯವಿಟ್ಟು ತಮ್ಮ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ನಾನು ತುಂಗಭದ್ರಾ ನಾಲೆಯ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆ.

ಉಪಾಧ್ಯಕ್ಷಣೆಯವರು : ತಾವು ಮಾಡಬಹುದು.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ತುಂಗಭದ್ರಾ ಎಡದಂಡೆ ನಾಲೆಯಲ್ಲಿ ನೀರು ಹಾಯಿಸುವುದನ್ನು ದಿನಾಂಕ 1.4.91ರಿಂದ.....

(ಗೊಂದಲ)

(ಮಾನ್ಯ ಬಿ.ಎಸ್. ಯಡಿಯೂರಪ್ಪನವರು ವೆಲ್‌ನಲ್ಲಿ ನಿಂತುಕೊಂಡು ಜೋರಾಗಿ ಮಾತನಾಡತೊಡಗಿದರು)

(ಗೊಂದಲ)

ಉಪಾಧ್ಯಕ್ಷಣಿಯವರು : ತಾವು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

(ಗೊಂದಲ)

ಉಪಾಧ್ಯಕ್ಷಣಿಯವರು : ಇದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಯಡಿಯೂರಪ್ಪನವರೇ ತಾವು ಹಿರಿಯ ಸದಸ್ಯರು, ಈಗ ತಾವು ಈತರದ ಬೇರೆ ಕಡೆಯಿಂದ ಮಾತನಾಡುವುದು ಸರಿಯಲ್ಲ ತಮ್ಮ ಜಾಗಕ್ಕೆ ಹೋಗಿ ಮಾತನಾಡಬೇಕು.

(ಬಿ.ಎಸ್. ಯಡಿಯೂರಪ್ಪನವರು ಹಾಗೂ ಇತರ ಬಿಜೆಪಿ ಸದಸ್ಯರು ಜೋರಾಗಿ ಮಾತನಾಡುತ್ತಾ ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷಣಿಯವರು : ಈಗೇನು ಅವರು ಮಾತನಾಡುತ್ತಿದ್ದಾರೆ ಅವರು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

6.55 ಪಿ.ಎಂ.

ಉಪಾಧ್ಯಕ್ಷಣಿಯವರು : ಮಾನ್ಯ ಚಿಕ್ಕೇಗೌಡರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಮಂತ್ರಿಗಳ ಹೇಳಿಕೆ

ತುಂಗಭದ್ರಾ ಎಡದಂಡೆ ನಾಲಾದಿಂದ 1-4-91ರಿಂದ ನೀರು ಹಾಯಿಸುವ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ತುಂಗಭದ್ರಾ ಎಡದಂಡೆ ನಾಲಾದಲ್ಲಿ ನೀರುಹಾಯಿಸುವುದನ್ನು ದಿನಾಂಕ 1.4.91ರಿಂದ ಮುಂದುವರಿಸಿ, ಹಾಲಿ ಬೆಳೆದು ನಿಂತಿರುವ ಪೈರುಗಳಿಗೆ ನೀರು ಒದಗಿಸುವ ಬಗ್ಗೆ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ಬಿ. ಚಂದ್ರೇಗೌಡರು ಮತ್ತಿತರರು ಪ್ರಸ್ತಾಪಿಸಿರುತ್ತಾದರೆ. ಈ ಬಗ್ಗೆ ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಈ ನಾಲೆಯ ಕೆಳಗಿನ ಕೆಲವು ರೈತರುಗಳ ಅರ್ಜಿಯನ್ನು ಪರಿಶೀಲಿಸಿ, ಜಲಾಶಯದ ಮಟ್ಟ 1578.90 ಅಡಿಗಳವರೆಗೆ ಹಿಂದಿನ ಸಾಲಿನಲ್ಲಿ ಅಂದರೆ ದಿನಾಂಕ 13.4.90ರವರೆಗೆ ಈ ನಾಲೆಯಲ್ಲಿ ನೀರನ್ನು ಹಾಯಿಸಲಾಗಿದ್ದು ಪ್ರಸ್ತುತ ಸಾಲಿನಲ್ಲಿಯೂ ಈ ಮಟ್ಟ ತಲುಪುವವರೆಗೆ ನೀರನ್ನು ಹಾಯಿಸಬೇಕೆಂದು ಉಚ್ಚನ್ಯಾಯಾಲಯವು ದಿನಾಂಕ 15.3.91ರಂದು ತೀರ್ಪು ನೀಡಿದೆ. ದಿನಾಂಕ 1.4.91ರಂದು ತುಂಗಭದ್ರಾ ಜಲಾಶಯದ ನೀರನ ಮಟ್ಟ 1578.90 ಅಡಿಗಳನ್ನು ತಲುಪುವ ಪರಿಸ್ಥಿತಿ ಇದ್ದು, ಈ ದಿನಾಂಕದ ನಂತರವೂ ನೀರನ್ನು ಹಾಯಿಸುವುದನ್ನು ಮುಂದುವರಿಸಿದಲ್ಲಿ ಉಚ್ಚನ್ಯಾಯಾಲದ ತೀರ್ಪಿಗೆ ವಿರುದ್ಧವಾಗಿ ಕ್ರಮ ಕೈಗೊಂಡಂತಾಗುವುದು. ಈ ಕಾರಣದಿಂದ ದಿನಾಂಕ 1.4.91 ರಿಂದ ಮುಂದಕ್ಕೆ ತುಂಗಭದ್ರಾ ಎಡದಂಡೆ ನಾಲೆಯಲ್ಲಿ 36ನೇ ಮೈಲಿಯ ನಿಯಂತ್ರಣ ಗೇಟನ್ನು ಮುಚ್ಚಬೇಕಾಗಿರುತ್ತದೆ.

ಶ್ರೀ ಸಿ. ಬೈರೇಗೌಡ : ಯಾವ ಯಾವ ತಾಲ್ಲೂಕಿಗೆ ಎಷ್ಟು ಹಣ ಬಿಡುಗಡೆ ಈ ಕುಡಿಯುವ ನೀರನ ಬಗ್ಗೆ ಮಾಡಲಾಗಿದೆ ಎಂಬುದರ ಬಗ್ಗೆ ಒಂದು ಹೇಳಿಕೆ ಕೊಡುತ್ತೇವೆಂದು ಮಂತ್ರಿಗಳು ಹೇಳಿದ್ದರು.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಕೇಳಿದ್ದುದು, ನೀರು ನಿಲ್ಲಿಸಿ ಎಂದು ಹೇಳಿದ್ದಲ್ಲ ಸಾವಿರಾರು ಎಕರೆ ಜಮೀನಿಗೆ ನೀರು ಕೊಡಿ ಎಂದು ನಾವು ಒತ್ತಾಯ ಮಾಡಿದರೆ ನೀವು ನಿಲ್ಲಿಸುತ್ತೇವೆಂದು ಹೇಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಏನಾಗಿದೆ, ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಒಂದು ತೀರ್ಪು ಕೊಟ್ಟಿದ್ದಾರೆ. ಅದರಲ್ಲಿ ರೈತರ ಅರ್ಜಿಗಳನ್ನೆಲ್ಲಾ ನೋಡಿ ಜಲಾಶಯದ ನೀರಿನ ಮಟ್ಟ 1578.90 ಅಡಿಗಳವರೆಗೆ ಹಿಂದಿನ ಸಾಲಿನಲ್ಲಿ ಬಂದರೆ, ಮತ್ತು ಆ ಮಟ್ಟ ತಲುಪುವವರೆಗೆ ಮಾತ್ರ ನೀರು ಹಾಯಿಸಬೇಕೆಂದು